ದಿಃ 03-12-2025 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ವಕೀಲರಿಂದಃ-**

ನನ್ನ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಸುಮಾರು 30 ವರ್ಷಗಳ ಹಿಂದೆ ದಾವಾ ಆಸ್ತಿಯಲ್ಲಿ ಒಂದು ಟಿನ ಶೆಡನ್ನು ಹಾಕಿರುತ್ತೇನೆ. ಸದರಿ ಟಿನ ಶೆಡನ್ನು ಹಾಕಲು ನಾನೇ ಖರ್ಚು ಭರಿಸಿರುತ್ತೇನೆ. ಸದರಿ ಟಿನ ಶೆಡನ್ನು ಖರ್ಚನ್ನು ಭರಿಸಿರುವ ಕುರಿತು ಹಾಗೂ ಹಾಕಿರುವ ಕುರಿತು ಯಾವುದೇ ಬಿಲ್ಲುಗಳನ್ನು ಹಾಜರುಪಡಿಸಿರುವುದಿಲ್ಲ.

ಈ ದಾವೆಯ ವಾದಿಯು ನನಗೆ ಯಾವುದೇ ರೇಂಟನ್ನು ನೀಡಿರುವುದಿಲ್ಲ. ನಿ.ಪಿ.10 ನ್ನು ತೋರಿಸಲಾಗಿ ಸಾಕ್ಷಿದಾರನು ಅದರ ಮೇಲೆ ಸಹಿಯು ತನ್ನದಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿದಾರರಿಗೆ ವಕಾಲತ್ತನ್ನು ತೋರಿಸಲಾಗಿ ಅದರ ಮೇಲೆ ತನ್ನ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ, ಸದರಿ ದಾಖಲೆಯನ್ನು ನಿ.ಪಿ.11 ಎಂದು, ಸಹಿಯನ್ನು ನಿ.ಪಿ.11 (ಎ) ಎಂದು ನಿಶಾನೆಗೊಳಿಸಲಾಯಿತು.

ನನ್ನ ಹಾಗೂ ವಾದಿಯ ನಡುವೆ ಎಷ್ಟು ರೆಂಟನ್ನು ನೀಡಬೇಕು ಎಂದು ಅಗ್ರಿಮೆಂಟ ಆಗಿರುತ್ತದೆ ಎಂಬ ಪ್ರಶ್ನೆಗೆ ಸದರಿ ಸಾಕ್ಷಿದಾರರು ಯಾವುದೇ ಅಗ್ರಿಮೆಂಟ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ತಕರಾರಿನಲ್ಲಿ ರೂ.50000/- ಗಳ ಠೇವಣಿ ಮಾಡಿರುವುದಾಗಿ ನಮೂದು ಮಾಡಿರುತ್ತೇವೆ ಎಂದರೆ ಸಾಕ್ಷಿದಾರರು ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಕೈಫಿಯತ್ತಿನಲ್ಲಿ ತಿಂಗಳಕ್ಕೆ ರೂ.1000/- ಬಾಡಿಗೆಯನ್ನು ನೀಡಿವುದಾಗಿ ಕರಾರು ಆಗಿರುತ್ತದೆ ಎಂದು ನಮೂದು ಮಾಡಿರುತ್ತೇವೆ ಎಂದರೆ ಸಾಕ್ಷಿದಾರರು ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿ ಹಾಗೂ ನನ್ನ ನಡುವೆ ಯಾವುದೇ ರೀತಿಯ ಗೇಣಿ ವ್ಯವಹಾರವು ಆಗಿರುವುದಿಲ್ಲ ಹಾಗೆ ಅದರಂತೆಯೇ ಯಾವುದೇ ದಾಸ್ತಾವೇಜನ್ನು ಅಮಲು ಬಜಾವಣೆಗೆ ತಂದಿರುವುದಿಲ್ಲ. ಕಾರ್ಪೋರೇಷನ ದವರು ಸದರಿ ಆಸ್ತಿಯನ್ನು ನಮಗೆ ನೀಡಿರುವ ಕುರಿತು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಜಾಗೆಗೆ ಸಂಬಂಧ ಪಟ್ಟ ಎಲ್ಲ ತೆರಿಗೆ ಹಾಗೂ ಬಿಲ್ಲುಗಳು ನಾವೆ ತುಂಬುತ್ತೇವೆ ಎಂದು ಹೇಳುತ್ತಾರೆ. ವಾದಿಯು ಹಾಗೂ ನನ್ನ ನಡುವೆ ಯಾವುದೇ

ಸಂಬಂಧ ಇರುವುದಿಲ್ಲ. ಸದರಿ ವಾದಿಯಿಂದ ನಾನು ಕಟ್ಟಡವನ್ನು ರೆಂಟಿನ ಆಧಾರದ ಮೇಲೆ ತೆಗೆದುಕೊಂಡಾದ 2 ವರ್ಷಗಳ ಕಾಲ ನಾನು ಬಾಡಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಠೇವಣಿ ಹಣದಲ್ಲಿ ನಾನು ಬಾಡಿಗೆಯನ್ನು ಕಡಿತ ಮಾಡುತ್ತ ಬಂದಿರುತ್ತೇನೆ ಎಂದರೆ ಸರಿಯಲ್ಲ. ಕೈಫಿಯತ್ತಿನ ಮೇಲೆ ತನ್ನ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಕೈಫಿಯತ್ತನ್ನು ನಿ.ಪಿ.12 ಎಂದು, ಸಹಿಯನ್ನು ನಿ.ಪಿ.12 (ಎ) ಎಂದು ನಿಶಾನೆಗೊಳಿಸಲಾಯಿತು. ವಾದಿಗೆ ಸಂಬಂಧ ಪಟ್ಟ ಹಾಗೆ ಯಾವುದೇ ಠೇವಣಿ ಹಣ ನನ್ನ ಬಳಿ ಇರುವುದಿಲ್ಲ ಎಂದರೆ ನಾನು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದು ಹೇಳುತ್ತಾರೆ.

ಸದರಿ ವಾದಿಗೆ ನಾನು 2005 ರಿಂದ ಇಲ್ಲಿಯವರೆಗೆ ಯಾವುದೇ ಬಾಡಿಗೆಯನ್ನು ನೀಡಿರುವುದಿಲ್ಲ ಎಂದರೆ ಪುನ: ಸಾಕ್ಷಿದಾರರು ನಾನು ಆತನಿಂದ ಯಾವುದೇ ಬಾಡಿಗೆ ಪಡೆದಿರುವುದಿಲ್ಲ ಎಂದು ಹೇಳುತ್ತಾರೆ. ವಾದಿಗೆ ಸಂಬಂಧ ಪಟ್ಟ ಹಾಗೆ ಯಾವುದೇ ಠೇವಣಿ ಹಣ ನನ್ನ ಬಳಿ ಇರುವುದಿಲ್ಲ ಎಂದರೆ ನಾನು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ಪ್ರ.ಪತ್ರದ ಮೇಲೆ ತನ್ನ ಸಹಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಸಾಕ್ಷಿ ಪ್ರ.ಪತ್ರವನ್ನು ನಿ.ಪಿ.13 ಎಂದು, ಸಹಿಯನ್ನು ನಿ.ಪಿ.13 (ಎ) ಎಂದು ನಿಶಾನೆಗೊಳಿಸಲಾಯಿತು.

ಸದರಿ ಜಾಗೆಯನ್ನು ವಾದಿಗೆ ಪುರಸಭೆಯಿಂದ ದಿ: 05/09/1984 ರಂದು ಗೇಣಿ ನೀಡಲಾಗಿತ್ತು ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಅಕ್ರಮವಾಗಿ ಸದರಿ ಜಾಗೆಯಲ್ಲಿ ಇರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ಜಾಗದ ಮೇಲೆ ಯಾವ ದಿನಾಂಕದಿಂದ ರೆಂಟಿನ ಮೇಲೆ ಇರುತ್ತಿರಿ ಎಂದರೆ ನಾನು ರೆಂಟ ತೆಗೆದುಕೊಂಡಿರುವುದಿಲ್ಲ ಎಂದು ಹೇಳುತ್ತಾರೆ.

ನಾನು ಸದರಿ ದಾವಾ ಆಸ್ತಿಯಲ್ಲಿ ಕಬ್ಜೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿದಾರರು ಈಗಾಗಲೇ ನಾನು ಸದರಿ ಆಸ್ತಿಯ ಕಬ್ಜೆಯಲ್ಲಿ ಇರುತ್ತೇನೆ ಎಂದು ಹೇಳುತ್ತಾರೆ. ಸದರಿ ದಾವಾ ಆಸ್ತಿಯನ್ನು ಖಾಲಿಗೊಳಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳುತ್ತಾರೆ. ನಾನು 2005 ರಿಂದ ಇಲ್ಲಿಯವರೆಗೆ ಸದರಿ ಜಾಗೆಗೆ ಸಂಬಂಧಪಟ್ಟ ಹಾಗೆ ರೆಂಟ ಕೊಡುವುದು

ಬರುತ್ತದೆ ಎಂದು ಖೊಟ್ಟಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಯಲ್ಲಿ ನಾನು consumer ಆಗಿರುವ ಕಾರಣ ಅದಕ್ಕೆ ಸಂಬಂಧಪಟ್ಟ ಬಿಲ್ಲುಗಳನ್ನು ಭರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಜೆಸ್ಕಾಂ ವತಿಯಿಂದ ನೀಡಿರುವ ಪರವಾನಗಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನೇ ಜಾಗೆಯ ಕಬ್ಜೆಯಲ್ಲಿ ಇರುತ್ತೇನೆ ಎಂದು ಉತ್ತರಿಸುತ್ತಾರೆ.

ಸದರಿ ಪರವಾನಗಿ ಪತ್ರವನ್ನು ಹಾಜರುಪಡಿಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ವಾದಿಯ ಜೊತೆ ಯಾವುದೇ ಸಂಬಂಧ ಇರುವುದಿಲ್ಲ, ಪುನ: ಸಾಕ್ಷಿದಾರರು ನಾನು ಅದರ ಕಬ್ಜೆಯನ್ನು ಹೊಂದಿರುವುದಾಗಿ ನುಡಿಯುತ್ತಾರೆ. ನಿ.ಡಿ.2 ರಲ್ಲಿ ಸದರಿ ಜಾಗೆಯು ಕಮರ್ಷಿಯಲ್ ಇರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಪುನ: ಆ ಜಾಗೆ ನಂದೇ ಇರುವ ಕಾರಣ ಅದು ನಮೂದಿಸುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ.

ನಿ.ಡಿ.2 ರಲ್ಲಿ ಹೌಸ್ ನಂಬರ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿದಾರರು ಅದರ ಪಕ್ಕದಲ್ಲಿಯೇ ನಾನು ವ್ಯಾಪಾರ ಮಾಡುತ್ತೇನೆ ಎಂದು ಹೇಳುತ್ತಾರೆ. ನಿ.ಡಿ.3 ಯಲ್ಲಿ ನಿಮ್ಮ ಹೆಸರು ಇಲ್ಲ ಎಂದರೆ ಸಾಕ್ಷಿಯು ಅದು ನನ್ನ ಹೆಸರಿನಲ್ಲಿ ಇರಲಿಲ್ಲ ಅಂದರೆ ನನಗೆ ಹೇಗೆ ಕೊಡುತ್ತಾರೆ ಎಂದು ಪ್ರಶ್ನಿಸುತ್ತಾರೆ. ನಿ.ಪಿ.10 ರಲ್ಲಿ ಚಾಂದ ಪಟೇಲ ಹಾಗೂ ಸಿದ್ದಣ್ಣ ಎಂಬುವವರ ರುಜು ಇರುತ್ತದೆ ಎಂದರೆ ಸಾಕ್ಷಿಯು ಅವರು ನಮಗೆ ಸಂಬಂಧ ಇರುವುದಿಲ್ಲ ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.

**ಮರುವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿದಾರನು ಒಪ್ಪಿಕೊಂಡಿರುತ್ತಾನೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ದಂಡಾಧೀಕಾರಿಗಳು, ಶಹಾಬಾದ